ಸ್ವಲ್ಪ ಹೆಚ್ಚು ಕಡಿಮೆ ಆದರೂ ಡೆಂಗಿ ಬರುವ ಸಾಧ್ಯತೆ ಇದೆ ಎಂದು ಮೈಗೆಲ್ಲ ಸೊಳ್ಳೆ ರೆಪೆಲೆಂಟ್ ಲೇಪಿಸಿ, ಮೊಣಕಾಲಿನವರೆಗೂ ಸಾಕ್ಸನ್ನು ಮುಚ್ಚಿಕೊಂಡು ವಿಶೇಷ ಕಾಳಜಿಯಿಂದ ಮಲಗಿದ್ದ ಆರಾಧ್ಯನಿಗೆ ತಾಯಿ ಎಷ್ಟು ಕರೆದರೂ ಎಚ್ಚರವಾಗಲಿಲ್ಲ.

ಅಣ್ಣನಿಗೆ ಕ್ರೈಮ್, ತಮ್ಮನಿಗೆ ಪೇಜ್ ತ್ರೀ, ಅಮ್ಮನಿಗೆ ಪದಬಂಧ ಎಲ್ಲವನ್ನೂ ಕೊಡುವ ದಿನಪತ್ರಿಕೆ ಆಗಷ್ಟೇ ಬಾಗಿಲ ಬಳಿ ಬಿದ್ದ ಸಪ್ಪಳವಾಗಿತ್ತು. ಪ್ರಿಂಟೆಡ್ ರಂಗೋಲಿಯ ಮೇಲೆ ನೀರೆರಚಲು ಹೋದ ತಾಯಿ ಪತ್ರಿಕೆಯನ್ನು ಒಳಗೆ ತಂದು ಒಗೆದಳು. ಮಲಗಿದ್ದ ಆರಾಧ್ಯನನ್ನು ನೋಡುತ್ತ, 'ಮುಖ ಯಾಕೆ ಮುಚ್ಚಿಕೊಳ್ಳುತ್ತೀಯೋ, ಡೆಂಗಿ ಸೊಳ್ಳೆ ಕಚ್ಚಿದರೆ ಅದು ಮೊಳಕಾಲು ಕೆಳಗೆ ಕಚ್ಚುವುದೆಂದು ಗೊತ್ತಿಲ್ಲವಾ' ಎಂದಳು. 'ಅವನು ನಿಂತಿಲ್ಲ ಕಣೆ, ಮಲಗಿದಾನೆ... ನಿನ್ನ ಬುದ್ಧಿ ಮತ್ತು ಸೊಳ್ಳೆ ಕಚ್ಚುವುದೆರಡೂ ಮೊಣಕಾಲ ಕೆಳಗೇ' ಎನ್ನುತ್ತಾ, ಆರಾಧ್ಯನ ಅಣ್ಣ ಪತ್ರಿಕೆಯನ್ನು ಎತ್ತಿಕೊಂಡು ನೇರವಾಗಿ ಎರಡನೇ ಪುಟಕ್ಕೆ ನಡೆದ. ಅಕ್ಷರ ಓದಲು ಬಂದಾಗಿನಿಂದ ರಾಜಕೀಯವಾಗಲಿ, ಸಾಮಾಜಿಕ ಸಂಗತಿಗಳಾಗಲಿ, ಕ್ರೀಡೆಯಾಗಲಿ ಅವನಿಗೆ ಸಂಬಂಧಿಸಿರಲಿಲ್ಲ. ಏನಿದ್ದರೂ ಅವನಿಗೆ ಸರಗಳ್ಳತನ, ಬೈಕು ಕದ್ದಿದ್ದು, ಆಪರೇಶನ್ ಆದನಂತರ ಹೊಟ್ಟೆಯಿಂದ ತೆಗೆದ ಕೇಜಿ ಭಾರದ ಗಡ್ಡೆ, ಹೆಬ್ಬಾವು ದನವನ್ನು ನುಂಗಿದ್ದು, ಒಂದು ಮಾವಿನಹಣ್ಣು; ಎರಡು ಗೊರಟೆ ಇತ್ಯಾದಿ ಸುದ್ದಿಗಳನ್ನು ಓದುವುದು ಮತ್ತು ಅದರ ಕಟ್ಟಿಂಗ್ ಸಂಗ್ರಹಿಸುವುದು ಬಹಳ ಮೋಜೆನಿಸುತ್ತಿದ್ದವು.

ಇಂದು ಎರಡನೇ ಪುಟ ತೆಗೆದದ್ದೇ ದಪ್ಪ ಅಕ್ಷರದಲ್ಲಿ ಕುಖ್ಯಾತ ಬಶೀರ ಉರ್ಫ್ 'ಟೆಕ್ಕಿ ಬಶೀರ' ಸೆರೆ ಎಂದು ಬರೆದಿತ್ತು. ಜೊತೆಗೆ ಅವನ ಚಿತ್ರ,



ಚಿತ್ರಗಳು: ಎಸ್.ವಿ. ಹೂಗಾರ